App. F. IX-4

Previous References. 1943. **File No.** 284.43

~~Secret~~ G.R.217.42,1-8 (Secret) **Serial Nos.** 1-2

Later References.

P

GENERAL AND REVENUE SECRETARIAT

Serial Nos. Two

Part B for July 1944.

SUBJECT Rs 10000/- for the Endowment of ~~the~~ maintenance of Sri Sathya Sai Veerasaiva Vidyarthinilayam, Vani Vilas Road, Tumkur.

No R.124.6 dated 5.7.1944.

To The Tumkur Assistant Commissioner
Deputy Comm, Tumkur dt.
Sanctions the recommendation

13-7-44.

WD 05967-GPB-50,000-9 3 42

194

From
Rajasevaprasakta
M. Seshadri, Esqr.,M.A.,
Muzrai Commissioner in Mysore
Bangalore.

To
K. Subba Rao, Esqr.,B.A.,
General Secretary to Government
of Mysore, Bangalore.

Dated 12th June 1944.

Despatched

Received

General No. M4-2922/43-44.
No.

Enclosure No. Rec'd

Subject:- Endowment of Rs.10,000/- for th maintenance of Sri Suthur Mutt Sri Veerasaiva Vidyarthinilayam, Vani Vilas Road, Mysore.

Sir,

I have the honour to forward herewith a copy of letter No.H.2949/43444 dated 31st March 1944, together with the connected papers received from the Deputy Commissioner, Mysore District, on the above subject.

Sri Pattada Sivarathri Swamijalu of Suthur Mutt, Nanjangud Taluk, has proposed to offer an endowment of Rs.10,000/- in favour of the above institution which is a Free Boarding Home for the students of the Veerasaiva Community studying in the Mysore University. The Registrar, University of Mysore, who was addressed in the matter, has stated in his letter No.G2/43-44 dated 25th May 1944, that, as the endowment is for the maintenance of the Veerasaiva Vidyarthi Nilayam and not for the award of scholarships, prizes or medals in the University, it cannot be ~~administered~~ administered by him.

As the object of the endowment is of a charitable nature to the benefit of the hostel, I request that sanction of Government may be kindly obtained for its acceptance under

Sri Sathur Mutt Veerashaiva Hostel at

5145

-2-

Muzrai File No. 284 1943-44

under Charitable Endowment Rules.

The connected records may be returned when no longer required.

I have the honour to be,
Sir,
Your most obedient servant,

M. N. Ramachandra.

Senior Assistant Commissioner,
for Muzrai Commissioner,
(Absent from Hq. Qrs).

(1) The D.C. reports that the amount has already been deposited in the District Treasury, Mysore, in A/c No. 13,283, and that the Swamy desires that the interest thereon — after the amount has been accepted as an endowment and credited under Charitable deposits — be paid to him for the maintenance of the Hostel. At 3¾% the amount will earn interest amounting to Rs. 375/- per annum.

(2) The proposal of the M.C. is for orders.

(3)

Subd.
24/5/44

[illegible]

[illegible]

(4)

(5)

8412

(6)

(7)

Draft Subd.
5/7/44

(8)

Memo No. R. 124-6, dated 6.7.44
To the M.C. with records.
Comptroller to Govt. Mysore Dist.
Sanctions the recommendation of the M.C. with

Letter No.H.2949/43-44 dated 31st March 1944, from the Deputy Commissioner, Mysore District, to the Muzrai Commissioner in Mysore, Bangalore.

--

Subject:- Charitable endowment for maintenance of Sri Suthur Mutt Sri Veerasiva Vidyarthinilayam Boarding Hostel, Vani Vilas Road, Mysore.

--

I have the honour to forward herewith applications dated 10-3-44 and 14-3-44 from Sri Swamigalu of Suthur, Nanjangud,Taluk, offering an endowment of Rs.10,000/- in favour of the above institution in addition to the land endowments, accepted by the Government in their order No.R.7139-41-L.R.217-42-7 dated 9-12-1943, for maintenance of the institution out of the interest realised therefrom. He has accordingly deposited the amount in S.B.account No.13283 Mysore District Treasury. He wishes further that the interest may be made payable to him for maintenance subject to furnishing of accounts of expenditure as per rules.

As the object of the endowment is a laudable one, I solicit orders whether the amount may be got credited to 7(a) Charitable Deposit.

For favour of an early orders in the matter.

"Copy"

M.N. Ramaiah

For Muzrai Commissioner

॥ ಶ್ರೀ ॥

ಸುತ್ತೂರು ವೀರಸಿಂಹಾಸನ

ಶ್ರೀ ಶಿವರಾತ್ರೀಶ್ವರ ವೀರಶೈವ ವಿದ್ಯಾರ್ಥಿ ನಿಲಯ

ಮೈ ಸೂ ರು

——:o:——

೧೯೪೪ ನೆಯ ಜನವರಿ ೧೬ ನೆಯ ತಾರೀಖಿನಲ್ಲಿ

ಮೈಸೂರು ಸೀಮೆಯ ರೆವಿನ್ಯೂ ಮತ್ತು ಅರ್ಥಸಚಿವರಾದ

ರಾಜಮಂತ್ರ ಪ್ರವೀಣ

ಶ್ರೀಮಾನ್ ಕೆ. ವಿ. ಅನಂತರಾಮು, ಬಿ. ಎ ,

ಇವರ ಅಧ್ಯಕ್ಷತೆಯಲ್ಲಿ ನೆರವೇರಿದ

ವಾರ್ಷಿಕೋತ್ಸವ ಕಾಲದಲ್ಲಿ ಪ್ರಕಟಿಸಿದ

೧೯೪೩—೪೪ ನೇ ಸಾಲಿನ ವರದಿ.

೧೯೪೪.

ಶ್ರೀ ಸುತ್ತೂರು ವೀರಸಿಂಹಾಸನ ಮಹಾಧೀಶ್ವರ
ಶ್ರೀ ಪಟ್ಟದ ಶಿವರಾತ್ರೀಶ್ವರ ಮಹಾಸ್ವಾಮಿಗಳು, ಮೈಸೂರು.



ಮೈಸೂರು ರಾಜಧಾನಿಯಲ್ಲಿ ವಾಣೀವಿಲಾಸ ರಸ್ತೆಯಲ್ಲಿರುವ
ಶ್ರೀ ಸುತ್ತೂರು ವೀರಗದ್ದಿಗೆ ಶಿವರಾತ್ರೀಶ್ವರ ವೀರಶೈವ ವಿದ್ಯಾರ್ಥಿ ನಿಲಯ.

ಸುತ್ತೂರು ವೀರಸಿಂಹಾಸನ

ಶ್ರೀ ಶಿವರಾತ್ರೀಶ್ವರ ವೀರಶೈವ ವಿದ್ಯಾರ್ಥಿ ನಿಲಯ,

ಮೈಸೂರು ನಗರ

೧೯೪೩ನೇ ಇಸವಿಯ ವಾರ್ಷಿಕ ವರದಿ

ಪ್ರಪದ್ಯೇಣ ಪುರಾಧೀಶಂ ವೀರಸಿಂಹಾಸನಾಧಿಪಂ ।
ವೀರಶೈವಾಬ್ಧಿಚಂದ್ರಂ ತಂ ಶಿವರಾತ್ರೀಶ್ವರಂ ಭಜೇ ॥

ವೃ॥ ಶ್ರೀಮದ್ಭಾಸುರ ವೀರಶೈವ ಪುತಭೂಶ್ವಿಷ್ವಸ್ಪದಾಯೋಗವಾ
ನೀಮಾತೀತಯಕೋವಿಶೇಷ ವಿಭವೈಸ್ಸಕ್ತೋಪ್ಯಸಕ್ತಸ್ಸುಧೀಃ ।
ಯೋ ಮರ್ತ್ಯೋಪಿ ಮಹೇಶ್ವರಾಂಶ ವಿಭವಃ ಕರ್ತುಂ ಕೃತಾರ್ಥಾ ಬಹೂ
ನಾತ್ಮೀಯಾನಿತಿ ತದ್ವಿಭೋಃ ಸ್ಥಿತಿರಭೂತ್ ಸುತ್ತೂರು ಸಿಂಹಾಸನೇ ॥

'ಭಾರತವು ವಿಶ್ವದ ವಿದ್ಯಾಲಯ' ಎಂಬ ಉಕ್ತಿಯನ್ನು ವಿಚಾರಮಾಡತೊಡಗಿದರೆ ಪ್ರಾಚೀನ ಭಾರತದ ವಿದ್ಯಾವೈಭವದ ಅಪೂರತೇಜಸ್ಸಿನ ಚಿತ್ರವೊಂದು ನಮ್ಮ ಮುಂದೆ ನಿಲ್ಲುತ್ತದೆ. ಆದರೆ ಇಂದು ಈ ಮಾತು ಅಸಂಬದ್ಧ ಪ್ರಲಾಪವೆಂದು ನಮ್ಮ ತರುಣ ಜಗತ್ತಿನ ದೃಢನಂಬಿಕೆ. ಏಕೆಂದರೆ ಇಂದಿನ ನಮ್ಮ ವಿದ್ಯೆಯು ಪಶ್ಚಿಮದಿಂದ ವಿಮಾನ ವೇಗದಲ್ಲಿ ಧಾವಿಸಿ ಪೂರ್ವಕ್ಕೆ ಬರುತ್ತಿದೆಯೆಂಬುದು ಅವರ ನಿತ್ಯ ಜೀವನದ ಅನುಭವ. ಆದರೆ ಅವರೇನೂ ಹಿಂದಿನ ಚರಿತ್ರೆಯ ನ್ನರಿಯಲಾರದ ಅಲಸರಲ್ಲ. ನಮ್ಮ ಹಿಂದಿನ 'ಇತಿಹಾಸದ ಹಾಳೆಗಳನ್ನು ಕೊಂಚ ಸಮಾಧಾನದಿಂದ ತಿರುವಿದರೆ ಅವರು ಭರತಖಂಡದ ಪ್ರಾಚೀನ ಸಂಸ್ಕೃತಿಯ ಸ್ವರ್ಗಸೋಪಾನವನ್ನು ಹತ್ತಿ, ವೈದಿಕಯುಗದ ಉಪನಿಷದಾರಾಮದಲ್ಲಿನ ಲತಾ ಕುಂಜಗಳಲ್ಲಿ ನಲಿದು ಮೈಮರೆಯುವರು.

ಹತ್ತುಸಾವಿರ ಮಂದಿ ವಿದ್ಯಾರ್ಥಿಗಳಿಗೆ ಅನ್ನವಸ್ತ್ರಗಳನಿತ್ತು ವಿದ್ಯಾಭ್ಯಾಸ ಮಾಡಿಸುತ್ತಿದ್ದ ವಿಶ್ವವಿದ್ಯಾಲಯಗಳು ಒಬ್ಬೊಬ್ಬ ಋಷಿಯನೇತೃತ್ವದಲ್ಲಿ ನಡೆಯುತ್ತಿದ್ದವು. ಅಂದು 'ಕುಲಪತಿ' (Vice chancellor) ಎಂಬ ಉಪಾಧಿಯು ಆತನಿಗಿತ್ತೆಂದು ಮಹಾಕವಿ ಕಾಳಿದಾಸನು ಉಲ್ಲೇಖಿಸಿದ್ದಾನೆ. ತಕ್ಷಶಿಲಾ, ನಲಂದ ಮುಂತಾದ ಕಡೆಗಳಲ್ಲಿ ಜಗತ್ಪ್ರಸಿದ್ಧವಾದ ವಿಶ್ವವಿದ್ಯಾನಿಲಯಗಳಿದ್ದವು. ಪ್ರಪಂಚದ ನಾನಾ ದೇಶಗಳಿಂದ ವಿದ್ಯಾರ್ಥಿಗಳು ಬಂದು ಶಾಸ್ತ್ರಾಧ್ಯಯನ ಮಾಡುತ್ತಿದ್ದರೆಂಬುದಕ್ಕೆ ಅನೇಕ ನಿದರ್ಶನಗಳಿರುತ್ತವೆ.

ಇಂತಹ ವಿದ್ಯಾಪ್ರಚಾರನೇ ಹಿಂದಿನವರ ಕಡೆಯ ಗುರಿಯಾಗಿತ್ತು. ಗುರುಪೀಠಗಳು ಏರ್ಪಟ್ಟುದು ಇದಕ್ಕಾಗಿಯೇ. ಅರಸನು ಇಂತಹ ವಿದ್ಯಾಸಂಸ್ಥೆಗಳಿಗೆ

ಬೆಂಬಲವಾಗಿದ್ದು ಸಹಾಯ ಮಾಡುತ್ತಿದ್ದನು. ಗುರುಗಳು ಜಗತ್ತಿನ ವಿಷಯ ಸುಖಗಳನ್ನು ಕಡೆಗಣಿಸಿ ಏಜನ್ಮಬ್ರಹ್ಮಚಾರಿಗಳಾಗಿ ನಿರಂತರವೂ ವಿದ್ಯಾಪ್ರಚಾರಕ್ಕೆ ತಮ್ಮ ಜೀವನವನ್ನು ಮುಡುಪಾಗಿಡುತ್ತಿದ್ದರು. ಆದುದರಿಂದಲೇ 'ಮಠಶ್ಚಾತ್ರಾದಿ ನಿಲಯಃ' 'ಮಠಗಳು ವಿದ್ಯಾರ್ಥಿನಿಲಯಗಳು, ಎಂದು ಪ್ರಸಿದ್ಧನಾದ ಅಮರಸಿಂಹನು ಉದ್ಘೋಷಿಸಿರುವುದು.

ದಕ್ಷಿಣ ದೇಶದಲ್ಲಿ ವೀರಶೈವ ಮತವು ಬೇರೂರಿ ನಿಂತ ಮೇಲೆ ಸ್ಥಾಪಿತವಾದ ಗುರು ವಿರಕ್ತ ಮಠಗಳಲ್ಲಿ ವಿದ್ಯಾಪ್ರಚಾರವು ಹೇರಳವಾಗಿ ನಡೆಯುತ್ತಿದ್ದಿತೆಂಬುದಕ್ಕೆ ಅನೇಕ ಉದಾಹರಣೆಗಳಿವೆ. ಈ ತೆರನಾದ ಗುರುಪರಂಪರೆಯಲ್ಲಿ ಮೈಸೂರು ಜಿಲ್ಲಾ ನಂಜನಗೂಡು ಸಮೀಪದಲ್ಲಿರುವ ಶ್ರೀ ಸುತ್ತೂರು ವೀರಸಿಂಹಾಸನ ಮಠವು ಅತ್ಯಂತ ಪ್ರಸಿದ್ಧವಾಗಿದೆ.

ಈ ಮಠದ ಪ್ರಾಚೀನತೆಯ ವಿಷಯದಲ್ಲಿ 'ರಾಜಕವಿ ಭೂಷಣ' ಶ್ರೀಮಾನ್ ಎಚ್. ಲಿಂಗರಾಜ ಅರಸರು ಉಲ್ಲೇಖಿಸಿರುವ ಅಂಶವು ಗಮನಾರ್ಹವಾಗಿದೆ.

''ಈ ಮಠವು ಬನಶೇಶ್ವರನ ಕಾಲಕ್ಕಿಂತಲೂ ಹಿಂದೆಯೇ ಸ್ಥಾಪಿತವಾಗಿದ್ದಿಂದು ಮಠಕ್ಕೆ ಸಂಬಂಧಪಟ್ಟ ಶಿಲಾಶಾಸನಗಳಿಂದಲೂ ಹಿಂದಿನ ಪಾಳೆಯಗಾರರು ಬರೆಯಿಸಿತಕ್ಕ ಶಾಸನಗಳಿಂದಲೂ ತಿಳಿಯಬರುತ್ತದೆ. ರಾಜೇಂದ್ರಚೋಳನ ಗುರುಗಳಾದ ಶ್ರೀ ಈಶಾನೇಶ್ವರಪ್ಪೊಡೆಯರ ಕಾಲದಲ್ಲಿ ಕ್ರಿ. ಶ. ೧೦೯೦ರಲ್ಲಿ ಹುಟ್ಟಿರತಕ್ಕ ಶಾಸನದಿಂದ ಇದು ವ್ಯಕ್ತವಾಗುತ್ತದೆ'' (ಸು. ಸಿಂ. ಗುರುಪರಂಪರೆ-ಮುನ್ನುಡಿ)

ಇಂತಹ ಮಹಿಮಾಸ್ಪದವಾದ ಗುರುಪೀಠದಲ್ಲಿ ಮಂಡಿಸಿದ್ದ ಮೂರ್ತಿಗಳು ಉದ್ದಾಮ ಪಂಡಿತರಾಗಿದ್ದುದಲ್ಲದೆ ಅನೇಕ ಗ್ರಂಥಗಳನ್ನು ರಚಿಸಿದ್ದಂತೆ ತಿಳಿದುಬಂದಿದೆ. ಈ ಪೀಠದ ಮೊದಲನೆಯ ಗುರುಗಳಾದ ಶ್ರೀ ಶಿವರಾತ್ರೀಶ್ವರ ಶಿವಾಚಾರ್ಯರು ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರ ಗಣಸಹಸ್ರನಾಮಾವಳಿಯಲ್ಲಿ ಉಲ್ಲೇಖಿಸಲ್ಪಟ್ಟಿರುವುದರಿಂದ ಇವರು ಪಂಡಿತಾರಾಧ್ಯರ ಸಮಕಾಲೀನರು ಇಲ್ಲವೆ ಇನ್ನೂ ಹಿಂದಿನವರಾಗಿರಬೇಕೆಂಬ ಅಂಶವು ಸ್ಪಷ್ಟವಾಗಿದೆ. ಈ ಪೀಠದ ಪಟ್ಟವಲ್ಲರಿಯಲ್ಲಿ ೪ನೆಯವರಾಗಿ ವಿರಾಜಿಸುವ ಶ್ರೀ ಸಿದ್ಧನಂಜದೇಶಿಕೇಂದ್ರ ಶಿವಾಚಾರ್ಯರು 'ಪರಮ ಶಿವಾಧಿಕ್ಯ ಶಿಖಾಮಣಿ' ಎಂಬ ವಿದ್ವತ್ತಾಪೂರ್ಣವಾದ ಗ್ರಂಥವನ್ನು ರಚಿಸಿರುವುದಾಗಿ ತಿಳಿದುಬಂದಿದೆ. ಅನಂತರ ೧೧ನೆಯ ಪೀಠಾಧಿಪತಿಗಳಾಗಿದ್ದ ಶ್ರೀ ಘನಲಿಂಗಿ ಶಿವಾಚಾರ್ಯರು 'ಘನಲಿಂಗಿ ವಚನ'ಎಂಬ ಗ್ರಂಥವನ್ನೂ ೧೨ನೆಯವರಾದ ಇಮ್ಮಡಿ ಶಿವರಾತ್ರೀಶ್ವರರು 'ಶ್ರೀವೃಷಭೇಂದ್ರವಿಜಯ' ಪುರಾಣವನ್ನೂ, ೧೪ನೆಯ ಪೀಠಾಧಿಪತಿಗಳಾಗಿದ್ದ ಶ್ರೀ ಚನ್ನಬಸವ ಶಿವಾಚಾರ್ಯ ಸ್ವಾಮಿಗಳು 'ಜೋಳರೇಣುಕ ಸಂವಾದ'ಎಂಬ 'ಶಿವಾಧಿಕ್ಯಶಿಖಾಮಣಿಯ' ಟೀಕೆಯನ್ನೂ ಬರೆದಿರುತ್ತಾರೆ. ಹೀಗೆ ಅನೇಕ ಮಹಾಮಹಿಮರಿಂದ ಅಲಂಕೃತವಾದ ಈ ಪೀಠವು ಅನೇಕ ರಾಜರುಗಳಿಂದ ಗೌರವಿಸಲ್ಪಟ್ಟಿರುವುದಲ್ಲದೆ ಆಳಿದ ಮಹಾಸ್ವಾಮಿಗಳಾದ

ವೀರಶೈವ ವಿದ್ಯಾರ್ಥಿ ನಿಲಯ

ಶ್ರೀ .ಮೆಮ್ಮಡಿ ಕೃಷ್ಣರಾಜೇಂದ್ರ ಒಡೆಯರಿಂದ ಇನಾಂತಿಗಳನ್ನೂ, ಸನ್ನದುಗ ಳನ್ನೂ ಪಡೆದಿದೆ. ಅನೇಕ ಶಾಖಾಮಠಗಳಿಂದ ವಿರಾಜಿಸುವ ಈ ಪೀಠದ ೨೨ ನೆಯ ಪಟ್ಟಾಧಿಕಾರಿಗಳಾಗಿರುವ ಪಟ್ಟದ ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳ ವರು ಈ ಮಠವನ್ನು ಅತ್ಯಂತ ಉನ್ನತಾವಸ್ಥೆಗೆ ತಂದಿರುತ್ತಾರೆ. ಇವರು ಮಠಕ್ಕೆ ಸಂಬಂಧಪಟ್ಟ ಅನೇಕ ದೇವಸ್ಥಾನಗಳ ಜೀರ್ಣೋದ್ಧಾರ ಮಾಡಿರುವುದಲ್ಲದೆ ಇವು ಗಳಿಗೆ ಸ್ಥಿರವಾದ ವರಮಾನ ಬರುವಂತೆ ಏರ್ಪಡಿಸಿರುತ್ತಾರೆ. ಸಾರ್ವಜನಿಕರ ಉಪ ಯೋಗಕ್ಕಾಗಿ ಆಸ್ಪತ್ರೆ ಮತ್ತು ಸ್ಕೂಲುಗಳ ಸುಂದರವಾದ ಕಟ್ಟಡಗಳನ್ನು ಕಟ್ಟಿಸಿ ರುವುದಲ್ಲದೆ ಶ್ರೀ ಮಠದಲ್ಲಿ ಪ್ರತಿನಿತ್ಯವೂ ಯಥೇಚ್ಛವಾಗಿ ಅನ್ನದಾಸೋಹವು ನಡೆ ಯುವಂತೆ ಏರ್ಪಡಿಸಿರುತ್ತಾರೆ. ಶ್ರೀ ಸ್ವಾಮಿಗಳವರ ಪ್ರಯತ್ನದ ಫಲವಾಗಿ ನಂಜನ ಗೂಡು ಮಹಾಕ್ಷೇತ್ರದಲ್ಲಿ ಶ್ರೀಮಠದ ಮುಖ್ಯ ಶಿಷ್ಯರಾದ ಶ್ರೀಮಾ ಕಬ್ಬಳ್ಳಿ ಸಾಹು ಕಾರ್ ಸಿರಿಯಪ್ಪನವರು ಒಂದು ವಿದ್ಯಾರ್ಥಿನಿಲಯವನ್ನು ಕಟ್ಟಿಸಿ ಅದರ ಮೇಲ್ವಿ ಚಾರಣೆಯನ್ನು ಶ್ರೀಯವರ ಆಡಳಿತಕ್ಕೆ (ಶಾಶ್ವತವಾಗಿ) ಅರ್ಪಿಸಿರುತ್ತಾರೆ. ಇದ ಲ್ಲದೆ ಶ್ರೀಯವರು ಟಿ. ನರಸೀಪುರ ಮತ್ತು ಚಾಮರಾಜನಗರ ಮುಂತಾದ ಮುಖ್ಯ ಸ್ಥಳಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಏರ್ಪಡಿಸುವ ಮಹತ್ಸಂಕಲ್ಪವುಳ್ಳವರಾಗಿರು ತ್ತಾರೆ.

ಸಂಸ್ಕೃತ ಪಾಠಶಾಲೆ

ಶ್ರೀಯವರು ವೀರಶೈವ ಸಮಾಜದಲ್ಲಿ ಧಾರ್ಮಿಕ ವಿದ್ಯಾಪ್ರಚಾರ ಮಾಡುವ ಉದ್ದೇಶದಿಂದ ತಮ್ಮ ಶಿಷ್ಯ ಪ್ರಮುಖರಿಗೆ ಉಪದೇಶ ಮಾಡಿ ಅವರ ಉದಾರ ಸಹಾ ಯದಿಂದ ಇದೇ ರಾಜಧಾನಿಯ ವಾಣೀನಿಲಾನ ರಸ್ತೆಯಲ್ಲಿ ಕೈಗಾರಿಕ್ಯಾತನಹಳ್ಳಿ ಸಾಹು ಕಾರ್ ಸಿದ್ಧಲಿಂಗಯ್ಯನವರ ಹೆಸರಿನಲ್ಲಿ ಒಂದು ಪಾಠಶಾಲೆಯನ್ನು ಏರ್ಪಡಿಸಿ ರುತ್ತಾರೆ. ಇಲ್ಲಿ ಸುಮಾರು ಐವತ್ತು ಮಂದಿ ವಿದ್ಯಾರ್ಥಿಗಳಿಗೆ ಅಶನ ವಸತಿಗಳಿಗೆ ವ್ಯವಸ್ಥೆ ಮಾಡಲಾಗಿದೆ. ಈ ಸಂಸ್ಥೆಗೆ ಶ್ರೀಯವರು ಅಧ್ಯಕ್ಷರಾಗಿದ್ದುಕೊಂಡು ಇದರ ಕಮಿಟಿ ಮೆಂಬರುಗಳ ಸಹಕಾರದಿಂದ ಪಾಠಶಾಲೆಯನ್ನು ತುಂಬಾ ಅಭಿವೃದ್ಧಿ ಸ್ಥಿತಿಗೆ ತಂದಿರುತ್ತಾರೆ. ಸದ್ಯದಲ್ಲಿ ಇಲ್ಲಿ ೩೦ ಮಂದಿ ವಿದ್ಯಾರ್ಥಿಗಳೂ ೪ ಮಂದಿ ಉಪಾಧ್ಯಾಯರೂ ಇರುವುದಲ್ಲದೆ ಪ್ರಥಮಾ, ಕಾವ್ಯ, ಚಂಪೂ, ನಾಟಕ ಮುಂತಾದ ಪರೀಕ್ಷೆಗಳಿಗೆ ತಕ್ಕಷ್ಟು ಸಂಸ್ಕೃತ ಶಿಕ್ಷಣವನ್ನೂ, ವೇದಾಧ್ಯಯನ ಜೋ ತಿಷ್ಯ ಪಾಠಗಳನ್ನೂ ನಡೆಯಿಸಲಾಗುತ್ತಿದೆ.

ಉಚಿತ ವಿದ್ಯಾರ್ಥಿನಿಲಯ

ಕೇವಲ ಧಾರ್ಮಿಕ ವ್ಯೆಯಿಂದಲೇ ಇಂದು ನಮ್ಮ ನಿತ್ಯ ಜೀವನವು ಸುಗಮ ವಾಗಲಾರದು. ವಿಜ್ಞಾನಯುಗದ ಈಗಿನ ಸನ್ನಿವೇಶದಲ್ಲಿ ಮಾನವನ ಮುಂದೆ ಬಿಡಿ

ಸಲಸದಳವಾದ ಅನೇಕ ಸಮಸ್ಯೆಗಳು ನಿಂತಿವೆ. ನಾವು ಅವುಗಳ ಆಳವರಿತು ಜೀವನ ದಹೋರಾಟದಲ್ಲಿ ಮುನ್ನುಗ್ಗಿದ ಹೊರತು ಅವು ಬಗೆ ಹರಿಯುವಂತಿಲ್ಲ. ಕೊಚ್ಚಿ ಬರುತ್ತಿರುವ ಪ್ರಗತಿಯ ಆ ಮಹಾ ಪ್ರವಾಹದಲ್ಲಿ ಈಜಿಪಾರಗಾಣುವ ನೈಪುಣ್ಯವನ್ನು ನಮ್ಮ ವಿದ್ಯಾರ್ಥಿಗಳಿಗೆ ಕಲಿಸಿದ ಹೊರತು ಅವರು ರಾಷ್ಟ್ರದ ಮುಂದಿನ ಗಂಟುಗಳನ್ನು ಬಿಡಿಸುವ ಸಾಮರ್ಥ್ಯವನ್ನು ಪಡೆಯುವುದೆಂತು? ಈ ತತ್ವದ ತಿರುಳನ್ನರಿತ ಅನೇಕ ಮಹನೀಯರು ಇಂದಿನ ವಿಶ್ವಭಾಷೆಯೆನಿಸಿದ ಆಂಗ್ಲ ವಿದ್ಯಾಭ್ಯಾಸಕ್ಕೆ ತಕ್ಕ ಅನುಕೂಲತೆಗಳ ಹಿನ್ನೆಲೆಯನ್ನು ಕಲ್ಪಿಸುತ್ತಿದ್ದಾರೆ. ಆದರೂ ತಂಡೋಪತಂಡವಾಗಿ ಮುನ್ನುಗ್ಗಿ ಬರುವ ಜನಜಾಗ್ರತಿಯ ಈ ಸಂದು ಕಟ್ಟಿನಲ್ಲಿ ವಿದ್ಯಾರ್ಥಿಗಿರುವ ಅನುಕೂಗಳು ಅತ್ಯಲ್ಪ. ಅದರಲ್ಲೂ ರಾಜಧಾನಿಯಲ್ಲಿ ಪ್ರೌಢ ವಿದ್ಯಾಭ್ಯಾಸ ಮಾಡುವ ವೀರಶೈವ ವಿದ್ಯಾರ್ಥಿಗಳಿಗಿರುವ ತೊಂದರೆಗಳನ್ನು ಹೇಳತೀರದು. ಇಂತಹ ಸಮಯದಲ್ಲಿ ದಯಾಳು ಗುರುಮಹಾಸ್ವಾಮಿಗಳವರು ವಿಶ್ವವಿದ್ಯಾಲಯದಲ್ಲಿ ಅಭ್ಯಾಸ ಮಾಡುವ ವೀರಶೈವ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿ ಸಮಾಜವನ್ನು ಚಿರಋಣಿಯನ್ನಾಗಿ ಮಾಡಿರುವುದಲ್ಲದೆ ಉಳಿದ ಮಠಾಧೀಶ್ವರರಿಗೆ ಮಾರ್ಗದರ್ಶಕರಾಗಿರುವರೆಂದು ಕೂಡ ಹೇಳಲು ಸಂತೋಷಿಸುತ್ತೇವೆ.

ಶ್ರೀ ಮಠದ ಆದಿಗುರುಗಳಾದ 'ಶ್ರೀ ಶಿವರಾತ್ರೀಶ್ವರ' ಪವಿತ್ರ ನಾಮಾಂಕಿತವಾದ ಈ ವಿದ್ಯಾರ್ಥಿನಿಲಯವು ಆ ಚಂದ್ರಾರ್ಕವಾಗಿ ನಡೆಯಬೇಕೆಂಬ ಘನೋದ್ದೇಶದಿಂದ ಶ್ರೀಯವರು ಸುಮಾರು ೨೦,೦೦೦ ಸಹಸ್ರ ರೂಪಾಯಿ ಬೆಲೆ ಬಾಳುವ ಈ ಭವ್ಯವಾದ ಕಟ್ಟಡ, ಸುಮಾರು ೧೮,೦೦೦ ಸಹಸ್ರ ರೂಪಾಯಿ ಬೆಲೆಬಾಳುವ ಸರ್ವಮಾನ್ಯ ಮಂಡನಹಳ್ಳಿ ಗ್ರಾಮ, ಮತ್ತು ಸುಮಾರು ೧೨,೦೦೦ ಸಹಸ್ರ ರೂಪಾಯಿ ಬೆಲೆಬಾಳುವ ಜಮೀನುಗಳು ಹೀಗೆ ಒಟ್ಟು ೫೦,೦೦೦ ಸಹಸ್ರ ರೂಪಾಯಿಗಳ ಸ್ಥಿರ ಆಸ್ತಿಯನ್ನು ಈ ಸಂಸ್ಥೆಗೆ ಕೊಟ್ಟು ತಕ್ಕ ರಿಕಾರ್ಡು ಮಾಡಿ ವ್ಯವಸ್ಥೆ ಮಾಡಿರುತ್ತಾರೆ. ಪ್ರಕೃತದಲ್ಲಿ ಮೇಲೆ ಕಂಡ ಸ್ಥಿರ ಆಸ್ತಿಗಳಿಂದ ಸಾಲಿಯಾನ ೧,೮೨೦ ರೂಪಾಯಿಗಳಿಗೆ ಕಡಮೆಯಿಲ್ಲದೆ ಆದಾಯ ಬರುತ್ತಾ ಇದೆ. ಉಳಿದ ಹಣವನ್ನು ಶ್ರೀ ಮಠದಿಂದಲೇ ವಹಿಸಲಾಗುತ್ತಿದೆ. ಮುಂದೆ ಇದಕ್ಕಾಗಿ ಗೌರ್ನಮೆಂಟಿನಲ್ಲಿ ಕೆಲವು ಮೊಬಲಗನ್ನು ಎಂಡೋಮೆಂಟಾಗಿಟ್ಟು ಅದರ ಬಡ್ಡಿಯಿಂದ ಸದರಿ ಸಂಸ್ಥೆಯು ನಿರಾಂತಕವಾಗಿ ನಡೆಯುವಂತೆ ಏರ್ಪಡಿಸಬೇಕೆಂದು ಪೂಜ್ಯ ಶ್ರೀಯವರು ಸಂಕಲ್ಪಿಸಿರುತ್ತಾರೆ.

ಮೇಲೆ ಕಂಡ ಸ್ಥಿರಸ್ವತ್ತುಗಳಲ್ಲಿ ಸರ್ವಮಾನ್ಯ ಮಂಡನಹಳ್ಳಿ ಗ್ರಾಮವನ್ನು ಯಾವಜ್ಜೀವವೂ ಗೌರ್ನಮೆಂಟು ಮ್ಯಾನೇಜುಮೆಂಟಿಗೆ ವಹಿಸಿ ಅದರಲ್ಲಿ ಬರುವ ಉತ್ಪತ್ತಿಯಲ್ಲಿ ಖರ್ಚು ಕಳೆದು ಉಳಿದ ಮೊಬಲಗನ್ನು ಈ ಸಂಸ್ಥೆಯ ಖರ್ಚಿಗೆ ಕೊಡಬೇಕೆಂದು ಶ್ರೀಯವರು ಘನ ಸರ್ಕಾರದವರನ್ನು ಕೇಳಿಕೊಂಡ ಮೇಲೆ ವಿದ್ಯಾಪ್ರಚಾರವೇ ಮುಖ್ಯೋದ್ದೇಶವಾಗಿಟ್ಟುಕೊಂಡಿರುವ ಸರ್ಕಾರದವರು ಸದರಿ ಗ್ರಾಮ

ವೀರಶೈವ ವಿದ್ಯಾರ್ಥಿ ನಿಲಯ

ನ್ನು ಮೊದಲನೆಯ ಸಲ ಐದುವರ್ಷಗಳ ಮಟ್ಟಿಗೆ ವಹಿಸಿಕೊಂಡು ಅದರಲ್ಲಿ ರುವ ಮೊಬಲಗಿನಲ್ಲಿ ಖರ್ಚು ಜಾತಾ ಉಳಿದ ಹಣವನ್ನು ಸಂಸ್ಥೆಗೆ ಕೊಡಲು ಸಂ ತೋಷದಿಂದ ಒಪ್ಪಿಕೊಂಡುದಕ್ಕಾಗಿ ನಾವು ಘನಸರ್ಕಾರದವರಿಗೆ ತುಂಬಾ ಕೃತಜ್ಞ ರಾಗಿರುತ್ತೇವೆ.

ಈನಿಲಯದಲ್ಲಿ ಮೊದಲನೆಯ ವರ್ಷ (೧೯೪೧-೪೨) ದಲ್ಲಿ ೫ ಮಂದಿಯೂ, ಎರಡನೆಯ ವರ್ಷ [೧೯೪೨-೪೩] ದಲ್ಲಿ ೧೮ ಮಂದಿ ವಿದ್ಯಾರ್ಥಿಗ ರೂಇದ್ದರು. ಈಸಲ ೩೦ಮಂದಿ ವಿದ್ಯಾರ್ಥಿಗಳಿದ್ದಾರೆ. ಇವರಲ್ಲಿ ಜೂನಿಯರ್ ಇಂಟರ್ ನಲ್ಲಿ ೫. ಸೀ. ಇಂಟರ್‌ನಲ್ಲಿ ೪. ಜೂ. ಬಿ.ಎ. ೫. ಎಕನಾಮಿಕ್ಸ್ ಮತ್ತು ಪಾಲಿ ಟಿಕ್ಸ್ [ಆನರ್ಸ್] ನಲ್ಲಿ೨. ಎಂ. ಬಿ. ಬಿ. ಎಸ್. ನಲ್ಲಿ ೧. ಸೀ. ಬಿ. ಎ. ನಲ್ಲಿ ೧೦. ಸಂಸ್ಕೃತ ii ನೇ[ಆನರ್ಸ್] ನಲ್ಲಿ ೧. ಪಾಲಿಟಿಕ್ಸ್ iii ನೇ [ಆನರ್ಸ್] ೧. ಎಂ. ಎ. ೧. ಹೀಗೆ ಒಟ್ಟು ಮೂವತ್ತು ಮಂದಿ ಇದ್ದಾರೆ. ಇದುವರೆಗೆ ಇಲ್ಲಿಂದ ನಾಲ್ಕು ಮಂದಿ ಬಿ. ಎ. ಪರೀಕ್ಷೆಯಲ್ಲಿಯೂ, ೫ ಮಂದಿ ಸೀ. ಇಂಟರ್ ಪರೀಕ್ಷೆಯ ಲ್ಲಿಯೂ ಉತ್ತೀರ್ಣರಾಗಿರುವುದಲ್ಲದೆ ನೇ॥ ಎಂ. ಜಿ. ನಂಜುಂಡಾರಾಧ್ಯರು ಕಳೆದ ವರ್ಷ ಇದೇ ವಿದ್ಯಾರ್ಥಿನಿಲಯದಲ್ಲಿದ್ದು ಸ್ವಂತವ್ಯಾಸಂಗದಿಂದ ಸಾಹಿತ್ಯವಿದ್ವಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ.

ನಿಲಯದ ವಿದ್ಯಾರ್ಥಿ ಸಂಘ

ಈ ಸಂಸ್ಥೆಯಲ್ಲಿರುವ ವಿದ್ಯಾರ್ಥಿಗಳು ಪರಸ್ಪರ ಸೌಹಾರ್ದ, ಭಾಷಣ, ಲೇಖನ, ಕಲೆ, ಮತ್ತು ಶರೀರ ಪೋಷಣೆ ಮುಂತಾದುವುಗಳ ಬೆಳವಣಿಗೆ ಮಾಡಿ ಕೊಳ್ಳುವ ಉದ್ದೇಶದಿಂದ ತಾರೀಖು ೨೧-೬-೪೨ ರಲ್ಲಿ ಒಂದು ಸಂಘವನ್ನು ಸ್ಥಾಪಿಸಿದರು. ಈ ಸಂಘಕ್ಕೆ ಮೊದಲನೆಯ ವರ್ಷ ಶ್ರೀಮಾನ್ ಬಿ. ಎಸ್. ಪುಟ್ಟಸ್ವಾಮಿ, ಬಿ. ಎ. ಬಿ. ಎಲ್. ಅವರೂ, ಈ ಸಲ ಶ್ರೀಮಾನ್ ಡಾ॥ ಸಿದ್ದಪ್ಪನವರೂ ಅಧ್ಯಕ್ಷರಾಗಿರುತ್ತಾರೆ. ಇದುವರೆಗೂ ಈ ಸಂಘದ ಆಶ್ರಯದಲ್ಲಿ ೮ ಚರ್ಚಾ ಗೋಷ್ಠಿಗಳೂ, ೪ ಆಶುಭಾಷಣಗಳೂ ನಡೆದಿವೆ.

ಸಂಘದ ವ್ಯಾರಂಭಭಾಷಣವನ್ನು ಮೊದಲನೆಯ ವರ್ಷ ಬೆಳಗಾಂ ಲಿಂಗರಾಜ ಕಾಲೇಜಿನ ಉಪಾಧ್ಯಾಯರಾದ ಪ್ರೊ. ಭೂಸನೂರು ಮಠ ಎಂ. ಎ. ಅವರೂ; ಕಳೆದ ಸಲ ಮೈಸೂರು ಮಹಾರಾಜಾಕಾಲೇಜಿನ ಸಂಸ್ಕೃತ ಮುಖ್ಯೋಪಾ ಧ್ಯಾಯರಾದ ಪ್ರೊ. ಸಿ. ಆರ್. ನರಸಿಂಹಶಾಸ್ತ್ರೀ ಎಂ. ಎ. ಅವರೂ ಮಾಡಿದರು. ಈ ಮುಂದೆ ಕಾಣಿಸಿರುವ ಮಹನೀಯರು ಸಂಘದ ಪ್ರಾರ್ಥನೆಯನ್ನು ಮನ್ನಿಸಿ ಇಲ್ಲಿಗೆ ದಯಮಾಡಿಸಿ ಅನೋಘವಾದ ಭಾಷಣಗಳನ್ನು ಮಾಡಿರುತ್ತಾರೆ.

ಸುತ್ತೂರು ನೀರಸಿಂಹಾಸನ

೧. ಶ್ರೀಮಾ ಕೆ. ಗುರುದತ್ ಬಿ. ಎ. ಅವರು.
೨. ,, ಸಿ. ಎಂ. ಹೆಚ್. ರಣಜೋಧಸಿಂಗ್ ಬಿ ಎ. ಅವರು.
೩. ಶ್ರೀ. ನಿ. ಪ್ರ. ಮೃತ್ಯುಂಜಯಸ್ವಾಮಿಗಳು, ಧಾರವಾಡ.
೪. ಶ್ರೀಗಳಾದ ಚನ್ನಮಲ್ಲಪ್ಪ ಮಾಸ್ತರ್; ಹಾವೇರಿ.
೫ ,, ಪ್ರೊ ಎ. ಆರ್. ಕೃಷ್ಣಶಾಸ್ತ್ರಿಗಳು, ಎಂ. ಎ
೬ ,, ಡಾ|| ಎಸ್. ಸಿ. ನಂದೀಮಠ್, ಎಂ. ಎ. ಪಿ. ಹೆಚ್. ಡಿ. ಅವರು.
ಪ್ರಿನ್ಸಿಪಾಲ್ ಲಿಂಗರಾಜ ಕಾಲೇಜ್, ಬೆಳಗಾಂ,
೭. ,, ಡಿ. ಎಲ್. ನರಸಿಂಹಾಚಾರ್ಯರು. ಎಂ. ಎ.
೮. ,, ಹೆಚ್. ದೇವೀರಪ್ಪ. ಬಿ. ಎ. (ಆನರ್ಸ್) ಅವರು.
೯. ,, ವೇ|| ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯರು.
೧೦ ,, ಎಂ. ಡಿ. ಶಿವನಂಜಪ್ಪ ಬಿ. ಎ. ಬಿ. ಎಲ್. ಅವರು.

ಇತರ ಕಾರ್ಯಕಲಾಪಗಳು

ಈ ಸಂಘದ ಆಶ್ರಯದಲ್ಲಿ 'ವಚನಶಾಸ್ತ್ರಪಿತಾಮಹ' ರಾವ್‌ಬಹದ್ದೂರ್ ಫ. ಗು. ಹಳಕಟ್ಟಿಯವರ ೬೪ ನೆಯ ವರ್ಷವರ್ಧಂತಿ ಮಹೋತ್ಸವ ಮತ್ತು ಸುಪ್ರಸಿದ್ಧ ಸಾಹಿತಿಗಳಾಗಿದ್ದು ಕರ್ಣಾಟಕದ ಶ್ರೀಮಾ ಎಂ. ಎಸ್. ಬಸವಲಿಂಗಯ್ಯನವರ ಅಕಾಲಮರಣಕ್ಕಾಗಿ ಸಂತಾಪಸೂಚಕ ಸಭೆಗಳು ನಡೆದುವಲ್ಲದೆ, ಭಾರತದ ಹೃದಯದಂತಿರುವ ವಿಶ್ವಜ್ಯೋತಿ ಮಹಾತ್ಮಾಗಾಂಧಿಯವರು ಘೋರ ಉಪವಾಸ ವ್ರತವನ್ನು ಆಚರಿಸುತ್ತಿದ್ದಾಗ ಅವರ ವ್ರತಕ್ಕೆ ಸಹಾನುಭೂತಿಯನ್ನು ಸೂಚಿಸುವುದಕ್ಕಾಗಿ ತಾ|| ೨೦-೨ ಳಖ ರಲ್ಲಿ ನಿಲಯದ ವಿದ್ಯಾರ್ಥಿಗಳು ಉಗ್ರಉಪವಾಸವನ್ನಾಚರಿಸಿದರು. ಮತ್ತು ಕನ್ನಡನಾಡಿನಲ್ಲಿ ತನ್ನ ಅಸದೃಶ ಭುಜಬಲದಿಂದ ಮಲ್ಲಾಗ್ರೇಸರರಾಗಿರುವ ರಾಣೇಬೆನ್ನೂರಿನ ಕನ್ನಡಜಟ್ಟಿ ಪೈಲವಾ ಶ್ರೀಮಾ ನಂಜಪ್ಪನವರಿಗೆ ಸತ್ಕಾರಕೂಟವನ್ನು ಏರ್ಪಡಿಸಲಾಗಿತ್ತು.

ಸಂಘದ ಮುನ್ನಡೆ

ನಮ್ಮ ಸಂಘವು ಈ ವರ್ಷ 'ಆಂತರ ವಿದ್ಯಾರ್ಥಿನಿಲಯಗಳ ಕನ್ನಡ ಚರ್ಚಾ ಸ್ಪರ್ಧೆ'ಯನ್ನೇರ್ಪಡಿಸಿ ಒಂದು ಹೆಜ್ಜೆ ಮುಂದಿಟ್ಟಿದೆ. ತಾ|| ೧೦ ೧೨-೪೩ ರಲ್ಲಿ ನಡೆದ ಈ ಸಭೆಯು ಶ್ರೀಮಾ ಡಾ|| ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ವಿಷಯವನ್ನು ಶ್ರೀಮಾ ಸಂಪದ್ಗಿರಿರಾಯರು ಎಂ. ಎ. ಅವರು ಸೂಚಿಸಿದ್ದರು. ಶ್ರೀಮಾ ಎಂ. ಯಮುನಾಚಾರ್ಯರು ಎಂ. ಎ., ಶ್ರೀಮಾ ಎಂ. ವಿ. ಕೃಷ್ಣರಾಯರು ಎಂ. ಎ. ಬಿ. ಟಿ. ಮತ್ತು ವಿ. ಸೀತಾರಾಮ್ಯಯ್ಯನವರು ಎಂ. ಎ. ಈ ಮಹಾಶಯರು ತೀರ್ಪುಗಾರರಾಗಿದ್ದರು. ಈ ಚರ್ಚೆಯಲ್ಲಿ

ೀರಶೈವ ವಿದ್ಯಾರ್ಥಿ ನಿಲಯ

ಿ ವಿದ್ಯಾರ್ಥಿನಿಲಯಗಳ ೨೮ ನುಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಬಹು ಮಾನವಿನಿಯೋಗದೊಂದಿಗೆ ಸಭೆಯು ಯಶಸ್ವಿಯಾಗಿ ನೆರವೇರಿತು.

ಪುಸ್ತಕ ಭಂಡಾರ

ನಿಲಯದ ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಗಾಗಿ ಶ್ರೀಯವರು ಇಲ್ಲಿ ಒಂದು ಪುಸ್ತಕ ಭಂಡಾರವನ್ನು ಸ್ಥಾಪಿಸಿದ್ದಾರೆ. ಸಧ್ಯದಲ್ಲಿ ಇಲ್ಲಿ ೨೦೦ ಇಂಗ್ಲಿಷ್ ಗ್ರಂಥ ಗಳೂ ೨೫೦ ಕನ್ನಡ ಗ್ರಂಥಗಳೂ ೧೦೦ ಇತರ ಭಾಷೆಯಗ್ರಂಥಗಳೂ ಇವೆ. ಆದರೆ ಈ ಸಂಖ್ಯೆಯು ಕಾಲೇಜು ವಿದ್ಯಾರ್ಥಿನಿಲಯದ ದೃಷ್ಟಿಯಿಂದ ತೀರ ಕಡಮೆಯಾದರೂ ಶ್ರೀಯವರು ಇದನ್ನು ಆದಷ್ಟು ಶೀಘ್ರದಲ್ಲಿಯೇ ಹೆಚ್ಚಿಸುವರೆಂಬ ಭರವಸೆಯುಳ್ಳವ ನಾಗಿರುತ್ತೇವೆ.

ವಾಚನಾಲಯ

ಜಗತ್ತಿನ ದಿನ ದಿನದ ವೃತ್ತಾಂತಗಳನ್ನು ಅರಿಯದಿದ್ದರೆ ನಮ್ಮ ಅಭಿವೃ ದ್ಧಿಯು ಹೆಗಲುಗನಸೇಸರಿ. ಇದಕ್ಕಾಗಿ ,ವಿದ್ಯಾರ್ಥಿಗಳು ವೃತ್ತಪತ್ರಿಕೆಗಳನ್ನೂ ಸಾಹಿತ್ಯ ಮತ್ತು ಕಲಾಪ್ರಚಾರಕಗೆಳಾವ ಉತ್ತಮ ಮಾಸಪತ್ರಿಕೆಗಳನ್ನೂ ಅವಶ್ಯ ವಾಗಿ ಅಭ್ಯಾಸಮಾಡಬೇಕಾಗಿದೆ. ಆದುದರಿಂದ ಈ ಸಂಸ್ಥೆಯಲ್ಲಿ ಶ್ರೀಯವರು ಒಂದು ವಾಚನಾಲಯವನ್ನು ಏರ್ಪಡಿಸಿರುತ್ತಾರೆ. ಸಧ್ಯದಲ್ಲಿ ಇಲ್ಲಿಗೆ ಎರಡು ದಿನ ಪತ್ರಿಕೆಗಳೂ ಎರಡು ವಾರ ಪತ್ರಿಕೆಗಳೂ ಮೂರು ಮಾಸ ಪತ್ರಿಕೆಗಳೂ ಬರುತ್ತಿವೆ. ಇದು ಇನ್ನೂ ಪ್ರಗತಿದಾಯಕವಾಗುವುದೆಂದು ನಂಬಿದ್ದೇವೆ.

ವ್ಯಾಯಾಮ

'ಶರೀರ ಮಾದ್ಯಂ ಖಲು ಧರ್ಮಸಾಧನಂ' ಅಂದರೆ 'ಧರ್ಮಸಾಧನೆಗೆ ಶರೀರ ಪರಿಪುಷ್ಟಿಯೇ ತಳಹದಿ' ಎಂಬ ಹಿರಿಯರ ಉಕ್ತಿಯನ್ನನುಸರಿಸಿ ನಿಲಯದ ವಿದ್ಯಾ ರ್ಥಿಗಳು ಇಂದಿನ ಆಟಪಾಟಗಳಲ್ಲಿ ಆಸಕ್ತಿಯಿಂದ ಭಾಗವಹಿಸಿ ತಮ್ಮ ವಿದ್ಯಾಭ್ಯಾ ಸಕ್ಕೆ ಉಲ್ಲಾಸವನ್ನು ಪಡೆಯಲೆಂಬ ಉದಾತ್ತ ಧ್ಯೇಯದಿಂದ ಇಲ್ಲಿ ಒಂದು ಆಟದ ಸಂಘವೇರ್ಪಟ್ಟಿದೆ. ಇದರಆಶ್ರಯದಲ್ಲಿ ವಾಲಿಬಾಲ್, ಫುಟ್‌ಬಾಲ್ ಮುಂತಾದ ಆಟಗಳನ್ನಾಡಲು ತಕ್ಕ ಅನುಕೂಲತೆಗಳನ್ನು ಏರ್ಪಡಿಸಿರುವುದಲ್ಲದೆ ಇಲ್ಲಿ 'ಶ್ರೀ ಸಿದ್ಧೇ ಶ್ವರ ವ್ಯಾಯಾಮಶಾಲೆ'ಯನ್ನು ಸ್ಥಾಪಿಸಬೇಕೆಂದು ಶ್ರೀಯವರು ಸಂಕಲ್ಪಿಸಿರುತ್ತಾರೆ.

ಉಪಸಂಹಾರ

ಒಟ್ಟನೆಲ್ಲಿ ಈ ವಿದ್ಯಾರ್ಥಿನಿಲಯದ ಎಲ್ಲ ಅಡಳಿತವನ್ನೂ ಶ್ರೀ ಮಠದ ಚಿಕ್ಕ ಸ್ವಾಮಿಗಳಾದ ಶ್ರೀ ಪಟ್ಟದ ಶಿವರಾತ್ರೆ ರಾಜೇಂದ್ರ ಸ್ವಾಮಿಗಳು ಸ್ವಂತವಾಗಿ ನೋಡಿಕೊಳ್ಳುತ್ತಿರುವುದರಿಂದ ಸಹವಾಗಲೇ ಶಿಸ್ತಿನ ಸ್ವರಾಜ್ಯವನ್ನು ಪಡೆದಿರುವೆ

ವೆಂದು ಹೇಳಲು ಹೆಮ್ಮೆ ಪಡುತ್ತೇವೆ. ಶ್ರೀ ಸ್ವಾಮಿಗಳು ಇನ್ನೂ ವಿದ್ಯಾರ್ಥಿ ದೆಶೆಯಲ್ಲಿದ್ದರೂ ಅವರ ಉತ್ಸಾಹ, ಕಾರ್ಯತತ್ಪರತೆ, ನಿಷ್ಠೆ, ಸರಳಜೀವನ, ಮೃದು ಭಾಷಣಾದಿಗಳು ನಮಗೆ ಮಾರ್ಗದರ್ಶಕವಾಗಿ ನಮ್ಮ ಜೀವನವನ್ನು ಬೆಳಗಿಸಿವೆ.

ಈ ಸಂಸ್ಥೆಯ ಕಾರ್ಯಕಲಾಪಗಳ ಸಂದರ್ಭದಲ್ಲಿ ಆದರದಿಂದ ದಯೆಮಾಡಿಸಿ ತಮ್ಮ ಅನೋಘ ಗಾನಮಾಧುರ್ಯರಸಪಾನ ಮಾಡಿಸುತ್ತಿರುವ ಗಾನಾಲಂಕಾರ, ರಾಗಾಲಾಪನ ಚತುರ, ಗಾಯನರತ್ನ, ಸಂಗೀತ ವಿದ್ವಾನ್ ಮಃ ರಾಃ ಶ್ರೀ ದೇವೇಂದ್ರಪ್ಪನವರು ಮತ್ತು ಅವರ ಪಾರ್ಟಿಯವರಿಗೂ ನಮ್ಮ ಪ್ರಾರ್ಥನೆಯನ್ನು ಮನ್ನಿಸಿ ಈ ಸಂಸ್ಥೆಯ ಕಾರ್ಯಕಲಾಪಗಳಲ್ಲಿ ಆಸಕ್ತಿಯಿಂದ ಭಾಗವಹಿಸಿ ಸಹಾಯ ಮಾಡುತ್ತಿರುವ ಫನಸರ್ಕಾರದ ರೆನೆನ್ಯೂ ಮತ್ತು ಅರ್ಥಸಚಿವರಾದ ರಾಜಮಂತ್ರ ಪ್ರವೀಣ ಶ್ರೀಮಾನ್ ಕೆ. ವಿ. ಅನಂತರಾಮನ್ ಬಿ ಎ., ಅವರಿಗೂ, ಮತ್ತು ತನ್ಮೂಲಕ ಶ್ರೀಮನ್ಮಹಾರಾಜಾ ಸರ್ಕಾರಕ್ಕೂ ಅನಂತ ಧನ್ಯವಾದಗಳನ್ನರ್ಪಿಸುತ್ತೇವೆ. ಶ್ರೀ ಚಾಮುಂಡಾಂಬಾ ಪರಿಪಾಲಿತ ಯದುಸಂತಾನವು ಅಕ್ಷಯವಾಗಿ ಬಳೆದು ಕನ್ನಡನಾಡಿನ ಭಾಗ್ಯದಂತಿರುವ ಶ್ರೀಮನ್ಮಹಾರಾಜರಿಗೆ ದೀರ್ಘಾಯುರಾರೋಗ್ಯಗಳನ್ನಿತ್ತು ಸಲಹಲೆಂದು ಶ್ರೀ ದೇವಿಯನ್ನು ಅನನ್ಯ ಭಾವದಿಂದ ಬೇಡುತ್ತೇವೆ. ವಿದ್ಯಾರ್ಥಿಗಳಲ್ಲಿ ಪಾತ್ಸಲ್ಯಾಭಿಮಾನಿಗಳನಿಟ್ಟು ಅವರ ಏಳ್ಗೆಯೇ ತಮ್ಮ ಜೀವನ ಸರ್ವಸ್ವವೆಂದುಭಾವಿಸಿರುವ ಶ್ರೇಯನಿಧಿ ನಾವು ಚಿರಋಣಿಗಳಾಗಿರುತ್ತೇವೆ. ಭಗವಂತನು ಎಲ್ಲ ಬಯಕೆಗಳನ್ನೂ ನೆರವೇರಿಸಿ ಇಂತಹ ಅನೇಕ ಸಂಸ್ಥೆಗಳು ಅವರ ಕೃಪೆಯಿಂದ ಏರ್ಪಾಡಾಗಿ ಅವು ಚಿರಸ್ಥಾಯಿಗಳಾಗಿರುವಂತೆ ಅನುಗ್ರಹಿಸಲೆಂದು ಬೇಡಿ ಇಲ್ಲಿ ನೆರದಿರುವರೆಲ್ಲರೂ ಅಭಿಮಾನವಿಟ್ಟು ದಯಮಾಡಿಸಿ ನಮ್ಮನ್ನು ಪ್ರೋತ್ಸಾಹಿಸಿದುದಕ್ಕಾಗಿ ತಮ್ಮೆಲ್ಲರನ್ನೂ ಸುತ್ತೂರ್ಮೆಯಂದಿಸಿ ಈ ವರದಿಯನ್ನು ವಿರಮಿಸುತ್ತೇವೆ.

ಗೌರವಕಾರ್ಯದರ್ಶಿಗಳು.

ಶ್ರೀಯುವರು ವಿದ್ಯಾರ್ಥಿನಿಲಯಕ್ಕೆ ಬರೆದಿರುವ
ವಿಲ್ ಕಾಪಿ

ಸ್ಃಒಂದುಸಾವಿರದ ಒಂಭೈನೂರು ನಲವತ್ತು ಮೂರನೆಯ ಇಸ್ವಿ ಏಪ್ರಿಲ್ ಮಾಹೆ ತಾರೀಖು ಏದರಲ್ಲು ನಂಜನಗೂಡು ತಾಲ್ಲೂಕು ಬಿಲ್ಲುಗೆರೆ ಹೋಬಳಿ-ಸುತ್ತೂರು ಗ್ರಾಮದಲ್ಲಿರುವ ಶ್ರೀ ವೀರಸಿಂಹಾಸನ ಮಠದ ಪಟ್ಟದ ಶಿವರಾತ್ರಿ ಸ್ವಾಮಿಗಳು ಬರೆಸಿಟ್ಟ ವಿಲ್. ಆದಾಗಿ, ಶ್ರೀ ಮಠದ ಮೂಲಗುರುಗಳಾದ ಶ್ರೀ ಶಿವರಾತ್ರಿಸ್ವಾಮಿಯವರ ಹೆಸರಿನ ಮೇಲೆ ಸಾವಿರದ ಒಂಭೈನೂರ ನಲವತ್ತೊಂದನೆಯ ಇಸ್ವಿ ಜುಲೈ ಮಾಹೆಯಲ್ಲಿ ಮೈಸೂರು ದೇಶದ ವೀರಶೈವ ವಿದ್ಯಾರ್ಥಿಗಳು ಎಂದರೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ 'ಸೌಕರ್ಯಕ್ಕಾಗಿ ಸುತ್ತೂರು ಶ್ರೀ ವೀರಗಡ್ಡಿಗೆ ಶಿವರಾತ್ರೀಶ್ವರಸ್ವಾಮಿಯವರ ವೀರಶೈವ ಕಾಲೇಜು ವಿದ್ಯಾರ್ಥಿಗಳ ಹಾಸ್ಟಲ್' ಎಂಬ ನಾಮಾಂಕಿತವುಳ್ಳ ಒಂದು ಹಾಸ್ಟಲನ್ನು ಮೈಸೂರು ರಾಜಧಾನಿಯಲ್ಲಿ ನಾವು ಸ್ಥಾಪಿಸಿರುವುದು ಸರಿಯಷ್ಟೆ. ಈ ಹಾಸ್ಟಲಿನ ಉಪಯೋಗಕ್ಕಾಗಿ, ಈ ಷಡ್ಯೂಲ್‌ನಲ್ಲಿ ಕಂಡ ಸುಮಾರು (೫೦,೦೦೦) ಏವತ್ತು ಸಾವಿರ ರೂಪಾಯಿ ಬೆಲೆ ಬಾಳುವ ಮೂರು ಸ್ಥಿರಸ್ವತ್ತುಗಳನ್ನು ನಾವು ವಹಿಸಿ ಸದರಿಹಾಸ್ಟಲಿನ ಮ್ಯಾನೇಜ್ಮೆಂಟು ಮತ್ತು ಆ ಹಾಸ್ಟಲಿನ ಉಪಯೋಗಕ್ಕಾಗಿ ಕೊಟ್ಟಿರುವ ಸ್ಥಿರಸ್ವತ್ತುಗಳ ಮ್ಯಾನೇಜುಮೆಂಟನ್ನೂ ಸಹ ನಾವೇ ತಹಲ್ವರಿವಿಗೂ ನಡೆಸುತ್ತಾ ಇದ್ದೇನೆ. ಇಲ್ಲಿಂದ ಮುಂದೆ ನಾವು ಇರುವವರೆಗೂ ಸದರಿ ಹಾಸ್ಟಲ್ ಮ್ಯಾನೇಜ್‌ಮೆಂಟನ್ನು ಮತ್ತು ಆದಕ್ಕೆ ಸೇರಿದ ಸ್ಥಿರಸ್ವತ್ತುಗಳ ಆಡಳಿತಗಳನ್ನೂ ನಡೆಸುತ್ತಾ ಬರುತ್ತೇವೆ. ನಮ್ಮ ಕಾಲಾನಂತರ ನಮ್ಮ ಮಠಕ್ಕೆ ಅಧಿಕಾರಿಗಳಾಗಿ ಬರುವ ಸ್ವಾಮಿಗಳವರೇ ಸದರಿ ಹಾಸ್ಟಲಿನ ಮತ್ತು ಆದಕ್ಕೆ ಸೇರಿದ ಸ್ವತ್ತುಗಳ ಮ್ಯಾನೇಜುಮೆಂಟನ್ನು ವಹಿಸಿಕೊಂಡು ಈ ಕೆಳಗೆ ನಮೂದಿಸಿರುವಂತೆ ನಡೆಯಿಸುತ್ತಾ ಬರುವುದು. ನಮ್ಮ ಮೈಸೂರು ದೇಶದ ವೀರಶೈವ ವಿದ್ಯಾರ್ಥಿಗಳ ವೈಕೆ ಮೈಸೂರು ಸಿಟಿಯಲ್ಲಿ ಇರುವ ಕಾಲೇಜುಗಳಲ್ಲಿ ವ್ಯಾಸಂಗಮಾಡತಕ್ಕ ವಿದ್ಯಾರ್ಥಿಗಳ ವೈಕೆ ಹದಿನೆಂಟುಮಂದಿಗೆ ಕಡಮೆಯಿಲ್ಲದಷ್ಟು ವಿದ್ಯಾರ್ಥಿಗಳಿಗೆ ಎ. ಷಡ್ಯೂಲ್‌ನಲ್ಲಿ ಕಂಡ ಹಾಸ್ಟಲ್ ಕಟ್ಟಡದಲ್ಲಿ ಉಚಿತ ಆಶನ ವಸತಿಗಳಿಗೆ ಏರ್ಪಡಿಸತಕ್ಕದ್ದು ಮತ್ತು ಈ ಹಾಸ್ಟಲಿಗೆ ಬೇಕಾಗುವ ಒಬ್ಬ ಸರಿಚಾರಕ ಮತ್ತು ಒಬ್ಬ ಜವಾನ ಇವರುಗಳಿಗೂ ಸಹ ಈ ಹಾಸ್ಟಲ್ ಕಟ್ಟಡದಲ್ಲಿಯೇ ಊಟಕ್ಕೂ ಮತ್ತು ವಾಸಕ್ಕೂ. ಅವಕಾಶಕೊಡತಕ್ಕದ್ದು. ಈ ಹಾಸ್ಟಲಿನ ಉಪಯೋಗಕ್ಕಾಗಿ ಬಿ. ಷಡ್ಯೂಲಿನಲ್ಲಿ ಕಂಡ ಸರ್ವಮಾನ್ಯ ಮಂಡನಹಳ್ಳಿ ಗ್ರಾಮದ ಉತ್ಪತ್ತಿ ಎಂದಕೆ ರೆವಿನ್ಯೂ ಕಂದಾಯ ಮತ್ತು ಎಕ್ಸೈಜು ಬಾಬು ಉತ್ಪತ್ತಿ ಇನ್ನು ಗಳನ್ನು ಮತ್ತು ಸಿ. ಷಡ್ಯೂಲಿನಲ್ಲಿ ಕಂಡ ತರೀಜಮಿನಾನುಗಳಿಂದ ಬರುವ ಭತ್ತ ವನ್ನೂ ಉಪಯೋಗಿಸತಕ್ಕದ್ದು. ಆದರೆ ಸಿ. ಷಡ್ಯೂಲ್‌ನಲ್ಲಿ ಕಂಡ ತರೀಜಮಿನಾನು

ಗಳ ಕಂಥಾಸ್ಥಾಯವನ್ನು ಮಾತ್ರ ಪ್ರತಿವರ್ಷವೂ ಕಾಲ ಕಾಲಕ್ಕೆ ಸ್ಥಿರಿಯಾಗಿ ಶ್ರೀಮಠ
ದಿಂದಲೇ ಪಾವತಿಮಾಡತಕ್ಕದ್ದು. ಬಿ. ಷಡ್ಯೂಲ್‌ನಲ್ಲಿ ಕಂಡ ಸರ್ವಮಾನ್ಯ ಗ್ರಾಮ
ವನ್ನು ಮ್ಯಾನೇಜುಮೆಂಟು ಬಗ್ಗೆ ಸರ್ಕಾರಕ್ಕೆ ನಾವು ಹಾಲಿ ವಹಿಸಿರುತ್ತೇವೆ.
ನಮ್ಮ ಕಾಲಾನಂತರವೂ ಸಹ ನಮ್ಮ ಮಠಕ್ಕೆ ಬರುವ ಅಧಿಕಾರಿಗಳು ಸದರಿ
ಗ್ರಾಮವನ್ನು ಸರ್ಕಾರದ ಮ್ಯಾನೇಜುಮೆಂಟಿನಲ್ಲಿ ಬಿಟ್ಟು ಆದರ ಉತ್ಪತ್ತಿಯನ್ನು
ಮೇಲೆ ಕಂಡ ಹಾಸ್ಟಲಿನ ಉಪಯೋಗಕ್ಕಾಗಿ ಖರ್ಚುಮಾಡತಕ್ಕದ್ದು. ಸದರಿ ಹಾಸ್ಟ
ಲಿಗೆ ಸೇರಿಸತಕ್ಕ ವಿದ್ಯಾರ್ಥಿಗಳ ಯೋಗ್ಯತೆ ಮತ್ತು ನಡತೆಗಳನ್ನು ನಾವು ಪರೀಕ್ಷಿಸಿ
ಯೋಗ್ಯರಾದವರನ್ನೇ ಸೇರಿಸಿಕೊಳ್ಳುತ್ತಾ ಇರುವಂತೆಯೇ ನಮ್ಮ ಕಾಲಾನಂತರವೂ
ಸಹ ನಮ್ಮ ಮಠಕ್ಕೆ ಅಧಿಕಾರಿಗಳಾಗತಕ್ಕ ಸ್ವಾಮಿಗಳೂ ಸಹ ಹಾಗೆಯೇ ನಡೆಯಿಸಿ
ಕೊಂಡು ಬರತಕ್ಕದ್ದು. ಈ ಹಾಸ್ಟಲಿಗಾಗಿ ಕೊಟ್ಟಿರುವ ಷಡ್ಯೂಲ್‌ನಲ್ಲಿ ಕಂಡ
ಸ್ವತ್ತುಗಳೆಲ್ಲವೂ ನಮ್ಮ ಸ್ವಯಾರ್ಜಿತವಾದವುಗಳಾಗಿರುತ್ತವೆ. ಈ ಸ್ವತ್ತುಗಳ
ಮೇಲೆ ನಮ್ಮ ಕಾಲಾನಂತರ ಈ ಮಠಾಧಿಕಾರಕ್ಕೆ ಬರತಕ್ಕವರಿಗೆ ಮೇಲೆ ಕಂಡ
ಮ್ಯಾನೇಜುಮೆಂಟು ಹಕ್ಕಲ್ಲದೆ ಮತ್ಯಾವ ಹಕ್ಕೂ ಇರುವುದಿಲ್ಲ. ನಮ್ಮ ಕಾಲಾನಂ
ತರ ಈಮಠಾಧಿಕಾರಕ್ಕೆ ಬರತಕ್ಕ ಸ್ವಾಮಿಗಳು ಶಿಷ್ಯಪಾರಂಪರ್ಯವಾಗಿ ಈ ಧರ್ಮ
ಕಾರ್ಯವನ್ನು ಆ ಚಂದ್ರಾರ್ಕವಾಗಿ ನಡೆಯಿಸಿಕೊಂಡು ಬರುತ್ತಾರೆಂದು ನಾವು ನಂಬು
ತ್ತೇವೆ. ಆದರೆ ಇದಕ್ಕೆ ಲೋಪವುಂಟಾದಲ್ಲಿ ವೀರಶೈವ ಸಮಾಜದವರು ಮೈಸೂರು
ಸರ್ಕಾರದವರಿಗೆ ಈ ವಿಷಯವನ್ನು ತಿಳಿಸಿ ಸದರಿ ಆಡಳಿತಗಳನ್ನು ಸರ್ಕಾರದವರೇ
ವಹಿಸಿಕೊಂಡು ನಮ್ಮ ಮೇಲಿಕಂಡ ಸಂಕಲ್ಪವನ್ನು ನೆರವೇರಿಸತಕ್ಕದ್ದು ಎಂಬುದಾಗಿ
ಶ್ರೀಗುರು ಶಿವರಾತ್ರೀಶ್ವರಸ್ವಾಮಿ ಪ್ರೀತ್ಯರ್ಥವಾಗಿ ನಮ್ಮ ಆತ್ಮಸಂತೋಷದಿಂದ
ಬರೆದು ಇಟ್ಟ ಕೊನೆಯವಿಲ್. ಷಡ್ಯೂಲ್ ಎ. ಮೈಸೂರು ಸಿಟಿ. ಜಾಮರಾಜ
ಮೊಹಲ್ಲಾ ವಾಣೀವಿಲಾಸ ರೋಡಿನಲ್ಲಿರತಕ್ಕದ್ದು. ಪೂರ್ವಕ್ಕೆ ಕರ್ಸರ್‌ವೆನ್ಸಿರಸ್ತೆ
ಪಶ್ಚಿಮಕ್ಕೆ ಗೀತಾರೋಡು. ದಕ್ಷಿಣಕ್ಕೆ ಸುಂದರಮ್ ಅಯ್ಯರವರ ಬಾಬ್ತು ಖಾಲಿ
ನಿವೇಶನ. ಉತ್ತರಕ್ಕೆ ವಾಣೀವಿಲಾಸ ರೋಡು. ಈ ಮಧ್ಯೆ ಇರತಕ್ಕ ಮುನಿಸಿಪಲ್
ಡೋರ್ ನಂಬರ್ (೧೧೨೮) ಒಂದು ಸಾವಿರದ ಒಂದುನೂರಿಪ್ಪತ್ತೆಂಟುವುಳ್ಳ
ಮೂರು ಅಂತಸ್ತಿನ ತಾರ್ಸಿಕಟ್ಟಡದ ಬಾಬ್ತು ಬಂಗಲಾ ಮತ್ತು ಇದಕ್ಕೆ ಸೇರಿದ
ಪಂಭಾಗದ ಔಟುಹೌಸು ಕಟ್ಟಡ, ಮೋಟಾರು ಗ್ಯಾರೇಜು ಮತ್ತು ಕೊಟ್ಟಿ
ವನ್ನೆರೆ ಇರತಕ್ಕ ಕಟ್ಟಡ, ಸುತ್ತಲೂ ಕಾಂಪೌಂಡುಗೋಡೆ ಇರತಕ್ಕದ್ದು. ಸುಮಾರ
[೨೦,೦೦೦-೦-೦] ಇಪ್ಪತ್ತು ಸಾವಿರ ರೂಪಾಯಿ ಅಂದಾಜಾವುಳ್ಳ ಕಟ್ಟಡ ಒಂದು
ಷಡ್ಯೂಲ್. ಬಿ. ಮೈಸೂರು ತಾಲ್ಲೂಕು ಚಟ್ಟಣಹಳ್ಳಿ ಹೋಬಳಿ ಸರ್ವಮಾನ್ಯ
ಮಂಡನಹಳ್ಳಿ ಗ್ರಾಮಕ್ಕೆ ಪೂರ್ವಕ್ಕೂ ಮತ್ತು ದಕ್ಷಿಣಕ್ಕೂ
ಸಹ ಚಾಮನಹಳ್ಳಿ ಮತ್ತು ದಾಳಗೌಡನ ಹುಂಡಿ ಎಲ್ಲೆ
ಪಶ್ಚಿಮಕ್ಕೆ ಕೋಳಿದ ಹುಂಡಿ ಎಲ್ಲೆ. ಉತ್ತರಕ್ಕೆ ಗುಜ್ಜಗೌಡನ ಪುರದ ಎಲ್ಲೆ

ನೀರಶೈವ ನಿದ್ಯಾರ್ಥಿ ನಿಲಯ

ಮಧ್ಯೆ ಇರುವ ಸರ್ವಮಾನ್ಯ ಮಂಡನಹಳ್ಳಿ ಗ್ರಾಮಕ್ಕೆ ವಿಸ್ತೀರ್ಣ (೨೪೯-೩೭) ಒದುನೂರು ನಲವತ್ತೊಂಭತ್ತು ಎಕರೆ, ಮೂವತ್ತೇಳು ಗುಂಟೆ ಆಕಾರ ಫಂಡ್ ೀಖಿಲ್ (೬೧೯-೬-೧೧) ಆರನೂರು ಹತ್ತೊಂಭತ್ತು . ರೂಪಾಯಿ ಆರಾಣೆ ೆನ್ನೊಂದುಪೈವುಳ್ಳ ಸರ್ವಮಾನ್ಯ ಗ್ರಾಮ. ಈ ಗ್ರಾಮದ ಕಿಮ್ಮತ್ ಮೊಬಲಗು ಏಮಾರು (೧೮,೦೦೦-೦-೦) ಹದಿನೆಂಟುಸಾವಿರ ರೂಪಾಯಿ ಉಳ್ಳದ್ದು ಒಂದು. ಡಬ್ಯೂಲ್ ಸಿ. ನಂಜನಗೂಡು ತಾಲ್ಲೂಕು ಬಿಲ್ಲುಗೆರೆ ಹೋಬಳಿ ಸುತ್ತೂರು ಗ್ರಾಮದಲ್ಲಿರತಕ್ಕ ತರೀ ಜಮೀನುಗಳು. ಪೂರ್ವಕ್ಕೆ ಸರ್ವೆ ಎಂಭತ್ತೇಳು, ಎಂಭ ತ್ತೊಂಟು, ಎಂಭತ್ತೊಂಭತ್ತು ಈ ಬಾಬತ್ತು ಸರ್ವೆ ನಂಬರ್ ಜಮೀನುಗಳು. ದಕ್ಷಿ ಣಕ್ಕೆ ಸರ್ವೆ ಒಂದುನೂರು ಹದಿಮೂರನೇ ನಂಬರ್ ಜಮೀನು ಪಶ್ಚಿಮಕ್ಕೆ ಸರ್ವೆ ಒಂದುನೂರು ಮೂವತ್ತಾರು ಮತ್ತು ಒಂದುನೂರು ಮೂವತ್ತೇಳನೇ ನಂಬರ್ ಜಮೀನು. ಈ ಮಧ್ಯೆ ಇರುವ ಸರ್ವೆ ನಂಬರ್ ಒಂದುನೂರು ಹದಿನಾಲ್ಕು ತರೀ ವಿಸ್ತೀರ್ಣ ಒಂದು ಎಕರೆ ಇಪ್ಪತ್ತೊಂದು ಗುಂಟೆ. ಆಕಾರ ಹನ್ನೊಂದು ರೂಪಾಯಿ ಉಳ್ಳದ್ದು ಒಂದು. ಸರ್ವೆ ನಂಬರ್ ಒಂದುನೂರು ಹದಿನೈದು ತರೀವಿಸ್ತೀರ್ಣ ಒಂದು. ಎಕರೆ ಮೂವತ್ತೈದು ಗುಂಟೆ. ಆಕಾರ ಹದಿನಾಲ್ಕು ರೂಪಾಯಿ ಉಳ್ಳದ್ದು ಒಂದು ಸರ್ವೆ ನಂಬರ್ ಒಂದುನೂರು ಹದಿನಾರು ತರೀವಿಸ್ತೀರ್ಣ ಒಂದು ಎಕರೆ ಹದಿನೆಂಟು ಗುಂಟೆ. ಆಕಾರ ಹನ್ನೊಂದು ರೂಪಾಯಿ ಉಳ್ಳದ್ದು. ಒಂದು ಸರ್ವೆ ನಂ ಬರ್ ಒಂದುನೂರು ಹದಿನೇಳನೇ ಒಂದನೇ ಪೋಡಿಗೆ ತರೀ ವಿಸ್ತೀರ್ಣ ಇಪ್ಪತ್ತಾರು ಗುಂಟೆ. ಆಕಾರ ಐದು ರೂಪಾಯಿ ಉಳ್ಳದ್ದು. ಒಂದು ಸರ್ವೆ ನಂಬರ್ ಒಂದುನೂರ ಹದಿನೇಳನೇ ಮೂರನೇ ಪೋಡಿಗೆ. ತರೀವಿಸ್ತೀರ್ಣ ಒಂದು ಎಕರೆ ನಾಲ್ಕು ಗುಂಟೆ ಆಕಾರ ಎಂಟು ರೂಪಾಯಿ ಉಳ್ಳದ್ದು. ಒಂದು ಸರ್ವೆ ನಂಬರ್ ಒಂದುನೂರು ಹದಿ ನೆಂಟನೇ ಒಂದನೇ ಪೋಡಿಗೆ. ತರೀವಿಸ್ತೀರ್ಣ ಹದಿಮೂರು ಗುಂಟೆ. ಆಕಾರ ಎರಡು ರೂಪಾಯಿ ಎಂಟಾಣೆ ಉಳ್ಳದ್ದು. ಒಂದು ಸರ್ವೆ ನಂಬರ್ ಒಂದುನೂರು ಹದಿನೆಂ ಟನೇ ಮೂರನೇ ಪೋಡಿಗೆ ತರೀ ವಿಸ್ತೀರ್ಣ ಇಪ್ಪತ್ತುಮೂರು ಗುಂಟೆ ಆಕಾರ ನಾಲ್ಕು ರೂಪಾಯಿ ಎಂಟಾಣೆ ಉಳ್ಳದ್ದು ಒಂದು. ಡಿಟೋ ಸುತ್ತೂರು ಗ್ರಾಮದಲ್ಲಿ ಪೂರ್ವಕ್ಕೆ ಸರ್ವೆ ಒಂದುನೂರು ಇಪ್ಪತ್ತುಮೂರನೇ ನಂಬರ್ ಜಮೀನು ದಕ್ಷಿ ಣಕ್ಕೆ ಸರ್ವೆ ಒಂದುನೂರು ಹದಿನೇಳನೇ ನಂಬರ್ ಜಮೀನು, ಪಶ್ಚಿಮಕ್ಕೆ ಸರ್ವೆ ಒಂದುನೂರು ಇಪ್ಪತ್ತುಮೂರನೇ ನಂಬರ್ ಜಮೀನು, ಉತ್ತರಕ್ಕೆ ಅರಮನೆ ಅವ್ಯತ ಮಹಲ್ ಕಾವಲು ಗದ್ದೆ, ಈ ಮಧ್ಯೆ ಇರುವ ಸರ್ವೆ ಒಂದುನೂರು ಇಪ್ಪತ್ತೆರಡನೇ ನಂಬರ್ ನಾಲ್ಕನೇ ಪೋಡಿಗೆ ತರೀ ವಿಸ್ತೀರ್ಣ ಇಪ್ಪತ್ತುಮೂರು ಗುಂಟೆ ಆಕಾರ ನಾಲ್ಕು ರೂಪಾಯಿ ಎಂಟಾಣೆ ಉಳ್ಳದ್ದು ಒಂದು, ಜುಮ್ಲಾ ಈ ಮೇಲ್ಕಂಡ ತರೀ ಜಮೀನುಗಳ ವಿಸ್ತೀರ್ಣ ಎಕರೆ ಮೂರು ಗುಂಟೆ ಆಕಾರ ಆರವತ್ತು ರೂಪಾಯಿ ಎಂಟಾಣೆ ಉಳ್ಳ ತರೀ ಜಮೀನುಗಳು. ಇವುಗಳ ಕಿಮ್ಮತ್ ಹನ್ನೆರಡು ಸಾವಿರ

ರೂಪಾಯಿ ಬೆಲೆಯುಳ್ಳ ತರೀ ಜಮೀನುಗಳು ಈ ಮೇಲ್ಕಂಡ ಮೂರು ಏಟಿನ್ ಸ್ಥಿರಸ್ವತ್ತುಗಳ ಕಿಮ್ಮತ್ ಜುಮ್ಲಾ [೫೦,೦೦೦] ಐವತ್ತು ಸಾವಿರ ರೂಪಾಯಿ ಬೆಲೆ ಉಳ್ಳ ಸ್ವತ್ತುಗಳು ಮಾತ್ರವೇ. ಪಟ್ಟದ ಶಿವರಾತ್ರಿ ಸ್ವಾಮಿಗಳು. ಸಾಕ್ಷಿಗಳು Siva rtri Rajendra Swamy Suttur. M. ಬಸವರಾಜಶಾಸ್ತ್ರಿ ಮೈಸೂರು. ಶಿವಕುಮಾರ ಸ್ವಾಮಿಗಳು ನರಗ್ಯಾತನಹಳ್ಳಿ ಮಠ. M. S. Gurupada Swamy Malangi. T. Narasipur Tq ಬಿಳ್ಳಂಗಿ ಪಟ್ಟದ ಶಿವರಾತ್ರಿ ಸ್ವಾಮಿಗಳುಸ್ವದಸ್ತ್ರೂರು. ತಾಜಾಖಲಂಗಿ ಮೇಲ್ಕಂಡ ಬರವಣಿಗೆಯಲ್ಲಿ ಕಂಡ ಅಂಶ ಗಳೆಲ್ಲಾ ನಮ್ಮ ಕಾಲಾನಂತರ ಜಾರೀಲಿ ಬರತಕ್ಕದ್ದು, ಪಟ್ಟದ ಶಿವರಾತ್ರಿ ಸ್ವಾಮಿ ಗಳು ಸ್ವದಸ್ತ್ರೂರು.

Presented in the office of the District Registrar of Mysore on 15-4-43 at 4-15 P. M. only.

ಪಟ್ಟದ ಶಿವರಾತ್ರಿ ಸ್ವಾಮಿಗಳು

Execution a dmitted by

ಪಟ್ಟದ ಶಿವರಾತ್ರಿ ಸ್ವಾಮಿಗಳು

Executant identified by N. S. Mallappa S/o Gurukar Sivananajppa Nagarle villege Nanjangud Taluk.

M. Narasimhiah
For Deputy Commissioner
District Registrar
Mysore Dist 15-4-43.

Registered as no 2/42 43 in Book III nol 2. pages 96-98 fees Recovered due Rs 16-4-0 (Sixteen & annas four only)

M. Narsimhiah
For District Registrar
Mysore District
28-4-43.

—:0:—

ಅಂತರ ವಿದ್ಯಾರ್ಥಿನಿಲಯ ಚರ್ಚಾಕೂಟದಲ್ಲಿ ಉಪಾಧ್ಯಾಯರಾಗಿ ಬಹುಮಾನ ವಿತ್ತ ಮಹನೀಯರು

ನಂ.	ಹೆಸರು	ಬಹುಮಾನ
೧	ಶ್ರೀಗಳಾದ ಸುಬ್ಬಣ್ಣನವರು ಜವಳಿ ಅಂಗಡಿ ಮೂಲಂಗಿ.	ಬೆಳ್ಳಿಟ್ರೋಫಿ.
೨	,, ಶಿವಲಿಂಗದೇವರು	ಸಂಜಾಲಕರ (ರಜತ ಭೃಂಗಾರ)
೩	,, ಡಾ|| ಸಿದ್ದಪ್ಪನವರು	ಮೊದಲನೆಯ ಬಹುಮಾನ ರಜತ ಕರಂಡ
೪	,, ಎಂ. ಎಸ್. ಪರಶಿವಮೂರ್ತಿ, ಬಿ. ಇ. ಅವರು	ಬೆಳ್ಳಿ ಕಪ್
೫	,, ಮಿಠಾಯಿ ಅಂಗಡಿ ಸಾಹುಕಾರ್ ಬಸವಪ್ಪನವರು	ಬೆಳ್ಳಿಕಪ್
೬	,, ಶ್ರೀ|| ನಿ ಪ್ರ. ಕುಂದೂರು ಮಠದ ನಿರ್ವಾಣಸ್ವಾಮಿಗಳು	ಬೆಳ್ಳಿಕಪ್

ಈ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು ರಾಜಧಾನಿಯಲ್ಲಿ ನಡೆದ ಅನೇಕ ಚರ್ಚಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಉತ್ತಮ ಬಹುಮಾನಗಳನ್ನು ಪಡೆದಿರುತ್ತಾರೆ. ಇವರ ಹೆಸರುಗಳನ್ನು ಮುಂದೆ ಕಾಣಿಸಿದೆ.

೧.	ಬಿ. ಪಿ. ನಾಗರಾಜಮೂರ್ತಿ ಗ. ಸ. ಹಾಲಪ್ಪ	ಮೊದಲನೆಯ ಬಹುಮಾನ ಹಾಸ್ಯಲಿಗೆ. (ಬೆಟ್ಟದಪುರದ ವಿದ್ಯಾರ್ಥಿನಿಲಯ ೧೯೪೧)
೨.	ಬಿ. ಪಿ ನಾಗರಾಜಮೂರ್ತಿ	(ವೆಂಕಣ್ಣಯ್ಯನವರ ಸ್ಮಾರಕ ಸ್ಪರ್ಧೆಯಲ್ಲಿ)
೩.	ಗ. ಸ. ಹಾಲಪ್ಪ ಜಿ. ಮರುಲಸಿದ್ಧಯ್ಯ	ರೋಲಿಂಗ್ ಕಪ್ಪು ಮತ್ತು ಪ್ರಥಮ ಬಹುಮಾನಗಳು. (ಅಂತರ ವಿ. ಚರ್ಚಾಸ್ಪರ್ಧೆಯಲ್ಲಿ)
೪.	ಗ. ಸ. ಹಾಲಪ್ಪ	ರೋಲಿಂಗ್ ಕಪ್ಪು ಮತ್ತು ಪ್ರಥಮ ಬಹುಮಾನ. (ವೀರಶೈವ ವಿದ್ಯಾರ್ಥಿಸಂಘ, ಮೈಸೂರು)

ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿ ಸಂಘ

ಅಧ್ಯಕ್ಷರು : ಶ್ರೀಮಾನ್ ಬಿ. ಎಸ್. ಪುಟ್ಟಸ್ವಾಮಿ, ಬಿ.ಎ., ಬಿ.ಎಲ್., ಆವರು (೧೯೪೨–೪೩)

,, ಶ್ರೀಮಾನ್ ಡಾ|| ಸಿದ್ದಪ್ಪನವರು, (೧೯೪೩–೪೪)

ಉಪಾಧ್ಯಕ್ಷರು : ಶ್ರೀಮಾನ್ ವಿದ್ವಾನ್ ಜಿ. ಮರುಳಸಿದ್ಧಯ್ಯನವರು,

ಕಾರ್ಯದರ್ಶಿಗಳು : ಬಿ. ನಂಜುಂಡಸ್ವಾಮಿಗಳು, (೧೯೪೨)

,, ಸಿ. ಬಿ ನಂದೀಶ್ವರಯ್ಯನವರು, (೧೯೪೩)

,, ಎಂ. ರಾಜಶೇಖರ ಮೂರ್ತಿಗಳು, ,,

,, ಎಂ ಎಸ್. ವೀರಭದ್ರಯ್ಯನವರು, (ಚರ್ಚಾ. ಸ್ಪರ್ಧೆ)

೧೯೪೧ ಆಗಸ್ಟ್ ೨೫ರಿಂದ ೧೯೪೨ನೆಯ ಜೂಲೈವರೆಗೆ

ಜಮಾ		ಖರ್ಚು	
			ರೂ. ಆ. ಪೈ.
ಶ್ರೀ ಮಠದಿಂದ			
ರೂ. ೧೫೫೬-೧೨-೯	ಆಹಾರ ಪದಾರ್ಥಗಳಿಗೆ		೧೧೩೭—೦—೦
	ಫರ್ನಿಚರ್ಸ್		೨೩೯-೧೨—೯
	ಕಟ್ಟಡದ ಬಾಡಿಗೆ (೧೯೪೧-೪೨)		೧೪೦—೦—೦
		ಜುಮ್ಲಾ	೧೫೫೬-೧೨—೯

೧೯೪೨ ಜೂಲೈಯಿಂದ ೧೯೪೩ನೆಯ ಜೂಲೈವರೆಗೆ

ಜಮಾ ಶ್ರೀ ಮಠದಿಂದ	ಖರ್ಚು ಸಂಸ್ಥೆಗಾಗಿ
೨೦೩೩—೫—೮	೨೦೩೩—೫—೮

ಸ್ವತಂತ್ರ ಕರ್ನಾಟಕ ಪ್ರೆಸ್, ಬಿ. ಸಿಟಿ.

I. R. S. App. F VI—G 2]

SUBJECT .....

.....

.....

Diary No. of letter replied to.....5145/R.....

General and Revenue Secretariat

(Mutt. Section)

the 5th July 1944.

Date of issue .....5. 7. 1944.....

M.C. D/Papers

Signed by .....(Mr S.K.V)

May this be—

(i) printed ?

(ii) treated as a standing order ?

(iii) published in the Gazette, English Part ?

(iv) translated ?

(v) placed at the disposal of the press?

(vi) published in the Gazette, Kannada Part ?

Section Muzrai

File No. 284-43

Serial No. 2

Proceedings of the Government of His Highness the Maharaja of Mysore.

Read—

Govt. Order No. R. 7139-41/F.R. 217-42-7, dated the 12th February 1943, directing that the Sarvamanya Mandanahalli, Chatnahalli Hobli, Mysore Taluk, endowed by Sri Pattada Shivaratri Swamigalu of Suttur Mutt, Nanjangud Taluk, to Sri Veerashaiva Vidyarthi-nilaya, Vani Vilasa Road, Mysore, be subject to certain conditions, taken under Govt. management, the net income in respect of the said Village being paid to the Sanskrit for being spent on the Hostel.

~~Order thereon:—No.~~

2. Letter No M 4-C. 2922/43-44, dated the 12th June 1944, from the Muzrai Commissioner in Mysore, stating that Sri Pattada-Shivaratri Swamigalu has offered a sum of Rs 10,000/

(ten thousand) which has been deposited by him in Savings Bank Account No. 13,283 of the District Treasury, Mysore, as an endowment, to Sri Veerashaiva Vidyarthi nilaya, Mysore, the interest realised thereon being utilised for the maintenance of the Hostel, and recommending, in the circumstances reported by the D.C., Mysore District, sanction to accept the above amount as an Endowment under Charitable Endowment Rules.

ORDER No. R. 124-26 / Encl. Papers.

Dated the 5th July 1944.

Sanctioned. [illegible]

List of Enclosures

[illegible]

For Gen. Secy. to Govt.

To - The Muzrai Commissioner in Mysore, with the connected papers.

" Comptroller to Government.

Copied by

" Deputy Commissioner, Mysore District

Examined by

WD 0279—GPB—22,500—14-4-38

PROCEEDINGS OF THE GOVERNMENT OF HIS HIGHNESS
THE MAHARAJA OF MYSORE.

READ:-

Government Order No.R.7139-41/L.R.217-42-7, dated the 12th February 1943, directing that the Sarvamanya Nandanahalli, Chetnahalli Hobli, Mysore Taluk, endowed ~~xx~~ by Sri Pattada Shivarathri Swamigalu of Suthur Mutt, Nanjangud Taluk, to Sri Veerashaiva Vidyarthinilaya, Vani Vilasa Road, Mysore, be subject to certain conditions, taken under Government management, the net income in respect of the said village being paid to the Swamigalu for being spent on the Hostel.

2. Letter No.M4-C.2922/43-44 dated the 12th June 1944, from the Muzrai Commissioner in Mysore, stating that Sri Pattada Shivarathri Swamigalu has offered a sum of Rs.10,000/- (Ten Thousand Rupees) which has been deposited by him in Savings Bank Account No.13,283 of the District Treasury, Mysore, as an Endowment to Sri Veerashaiva Vidyarthinilaya, Mysore, the interest realised thereon being utilised for the maintenance of the Hostel, and recommending in the circumstances, reported by the Deputy Commissioner, Mysore District, sanction to accept the above amount as an endowment under Charitable Endowment Rules.

ORDER NO: R 124-26/Muz/284-43-2.

Dated, Bangalore, the 5-5 July 1944.

Sanctioned.

2. The necessary agreement should be taken under the rules.

(DRAFT)

for General Secretary to Government.

To

The Muzrai Commissioner in Mysore, with the connected papers.

" Comptroller to Government.

" Deputy Commissioner, Mysore District.